# ಯುವ ನಿರ್ದೇಶಕನ 'ಮಮ್ಮಿ'



ಅದು 'ಮಮ್ಮಿ' ಚಿತ್ರದ ಟ್ರೇಲರ್ ಪ್ರದರ್ಶನದ ಕಾರ್ಯಕ್ರಮ. ಟ್ರೇಲರ್ ನೋಡಿದವರ ಕಣ್ಣುಗಳಲ್ಲಿ ಭಯದ ನೆರಳು ಕಾಣಿಸುತ್ತಿದ್ದರೆ, ಚಿತ್ರತಂಡದ ಕಣ್ಣುಗಳಲ್ಲಿ ಸಂತೋಷದ ಹೊಳಪು.

ಥ್ರಿಲ್ಲರ್ ಚಿತ್ರಗಳು ಜನಮನ ಗೆಲ್ಲುತ್ತಿರುವ ಸಂದರ್ಭದಲ್ಲಿ 'ಮಮ್ಮಿ' ಸಿನಿಮಾ ತೆರೆಕಾಣಲು ಸಿದ್ಧತೆ ನಡೆಸುತ್ತಿದೆ. ಅಮ್ಮ ಮತ್ತು ಪುಟಾಣಿ ಮಗಳ ನಡುವಿನ ಸಂಬಂಧದ ಕಥೆಯ ಈ ಚಿತ್ರದಲ್ಲಿ ಇರುವುದು ನಾಲ್ಕೇ ನಾಲ್ಕು ಪಾತ್ರಗಳಂತೆ. ಅಮ್ಮ–ಮಗಳ ಪಾತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ಹಾಗೂ ಬೇಬಿ ಯುವಿನಾ ಪಾರ್ಥವಿ ನಟಿಸಿದ್ದಾರೆ.

ಚಿತ್ರದ ನಿರ್ದೇಶಕ ಲೋಹಿತ್ 22 ವರ್ಷದ ತರುಣ. ವಯಸ್ಸು ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವ ಭಾವ ಚಿತ್ರದ ಟ್ರೇಲರ್ ನೋಡಿದವರ ಮಾತುಗಳಲ್ಲಿತ್ತು. 'ಮಮ್ಮಿ' ಮೆಚ್ಚಿಕೊಂಡವರ ಸಾಲಿನಲ್ಲಿ ಉಪೇಂದ್ರ ಕೂಡ ಇದ್ದರು. 'ಇದು ಯಾವುದೇ ಭಾಷೆಯ ಸಿನಿಮಾಕ್ಕೆ ಸವಾಲು ನೀಡುವಂತಹದ್ದು' ಎಂದವರು ಬಣ್ಣಿಸಿದರು. 'ನಾನು ಕೆಲಸ ಮಾಡಿರುವ ಟಾಪ್–10 ನಿರ್ದೇಶಕರಲ್ಲಿ ಲೋಹಿತ್ ಕೂಡ ಒಬ್ಬರು' ಎಂದು ಪ್ರಿಯಾಂಕಾ ಮೆಚ್ಚಿಕೊಂಡರು. ಎಲ್ಲರ ಮೆಚ್ಚುಗೆಯ ಮಾತುಗಳ ಕೇಂದ್ರಬಿಂದುವಾಗಿದ್ದ ಲೋಹಿತ್, 'ಈ ಸಿನಿಮಾ ಖಂಡಿತಾ ಗೆಲ್ಲಲಿದೆ' ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

ವೇಣು ಅವರ ಛಾಯಾಗ್ರಹಣ ಹಾಗೂ ಅಜನೀಶ್ ಲೋಕನಾಥ್ ಅವರು ಹಿನ್ನೆಲೆ ಸಂಗೀತ 'ಮಮ್ಮಿ' ಚಿತ್ರಕ್ಕಿದೆ. ಇಡೀ ಚಿತ್ರ ಪಾಶ್ಚಿಮಾತ್ಯ ಶೈಲಿಯಲ್ಲಿ ರೂಪುಗೊಂಡಿದೆಯಂತೆ. ಈ ಚಿತ್ರಕ್ಕಾಗಿ ಅಜನೀಶ್ ವಿಶೇಷ ಧ್ವನಿವಿನ್ಯಾಸ ಮಾಡಿದ್ದಾರಂತೆ.



# ಯಶಸ್ವೀ ಜೋಡಿಯ 'ಉಸ್ತಾದ್'

ದುನಿಯಾ ವಿಜಯ್ ಹಾಗೂ ಎಂ.ಎಸ್. ರಮೇಶ್ ಗಾಂಧೀನಗರದ ಯಶಸ್ವೀ ಜೋಡಿಗಳಲ್ಲೊಂದು. ಇಬ್ಬರೂ ಒಟ್ಟಾಗಿ ಕೆಲಸ ಮಾಡಿದ 'ತಾಕತ್' ಹಾಗೂ 'ಶಂಕರ್ ಐ.ಪಿ.ಎಸ್' ಚಿತ್ರಗಳು ಯಶಸ್ಸನ್ನು ಸವಿದಿದ್ದವು. ಈಗ ಗೆಲುವಿನ ಹ್ಯಾಟ್ರಿಕ್ ಸಾಧಿಸುವ ಹಂಬಲದಲ್ಲಿ ವಿಜಿ–ರಮೇಶ್ ಮತ್ತೆ ಒಂದಾಗಿದ್ದಾರೆ. ಈ ಜೋಡಿ ಹೊಸ ಚಿತ್ರ 'ಉಸ್ತಾದ್' ಕಳೆದ ವಾರ ಮುಹೂರ್ತ ನಡೆಸಿದೆ.

'ಉಸ್ತಾದ್' ಮುಹೂರ್ತ ಹೆಸರಿಗೆ ತಕ್ಕಂತೆ ಅದ್ದೂರಿಯಾಗಿತ್ತು. ರವಿಚಂದ್ರನ್, ರಾಕ್‌ಲೈನ್ ವೆಂಕಟೇಶ್, ಹೇಮಾಚೌಧುರಿ, ಬಿ.ಎಸ್. ಲಿಂಗದೇವರು, ಪಿ. ಶೇಷಾದ್ರಿ, ಮುಂತಾದವರು ಮುಹೂರ್ತದಲ್ಲಿ ಭಾಗವಹಿಸಿ 'ಉಸ್ತಾದ್'ಗೆ ಶುಭಕೋರಿದರು.

ಮತ್ತೊಮ್ಮೆ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ನಟಿಸುತ್ತಿರುವ ಖುಷಿ ವಿಜಯ್ ಅವರ ಮಾತುಗಳಲ್ಲಿ ಎದ್ದುಕಾಣಿಸುತ್ತಿತ್ತು. 'ಪೊಲೀಸ್‌ನವರ ಬಗ್ಗೆ ಸಮಾಜದಲ್ಲಿ ಒಂದು ಕೆಟ್ಟ ಅಭಿಪ್ರಾಯವಿದೆ. ಆದರೆ, ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕ ಪೊಲೀಸರೂ ಇದ್ದಾರೆ. ಅಂಥವರ ಬಗ್ಗೆ ಮಾತನಾಡುವುದು ನಮ್ಮ ಸಿನಿಮಾದ ಉದ್ದೇಶ. ಪೊಲೀಸ್ ವ್ಯವಸ್ಥೆಯ ಧನಾತ್ಮಕ ಸಂಗತಿಗಳನ್ನು ಸಿನಿಮಾ ಮೂಲಕ ಹೇಳಲಿದ್ದೇವೆ' ಎನ್ನುತ್ತಾರೆ ವಿಜಯ್.

ಅಂದಹಾಗೆ, ಈ ಉಸ್ತಾದ್ ಒಬ್ಬ ಪೊಲೀಸ್ ಅಧಿಕಾರಿಯ ಕಥನವೇನಲ್ಲ. ಚಿತ್ರದಲ್ಲಿ ನಿಜ ಜೀವನದ ಅನೇಕ ಅಧಿಕಾರಿಗಳ ಛಾಯೆಯನ್ನು ಕಾಣಬಹುದಂತೆ. 'ನೈಜ ಘಟನೆಗಳನ್ನು ಚಿತ್ರದಲ್ಲಿ ಅಳವಡಿಸಿದ್ದೇವೆ' ಎನ್ನುವ ವಿಜಯ್, ಈ ಸಿನಿಮಾ ಸಾಮಾಜಿಕ ಎಚ್ಚರ ಮೂಡಿಸುವ ಕೆಲಸ ಮಾಡುತ್ತದಂತೆ.